

بِسۡمِ اللّٰہِ الرَّحۡمٰنِ الرَّحِیۡمِ

# ಯು.ಕೆ. ಅನ್‌ಸಾರುಲ್ಲಾಹ್ ಮತ್ತು ಲಜ್‌ನ ಇಜ್ತಿಮಾ ಹಾಗೂ ಜಾಮಿಯ ವಿದ್ಯಾರ್ಥಿ ಮರ್ಝ್‌ಹರ್ ಅಹ್‌ಸನ್‌ರ ಸ್ಮರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **30-09-2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ಯು.ಕೆ.ಯ ಮಜ್ಲಿಸ್ ಅನ್‌ಸಾರುಲ್ಲಾ ಮತ್ತು ಲಜ್‌ನ ಇಮಾಯಿಲ್ಲಾಹ್ ಇಜ್ತಿಮಾಗಳು ಪ್ರಾರಂಭವಾಗುತ್ತಿವೆ. ನಮ್ಮ ಇಜ್ತಿಮಾಗಳ ಮುಖ್ಯ ಉದ್ದೇಶ ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವುದು ಮತ್ತು ಪರಸ್ಪರ ಪ್ರೀತಿ ಮತ್ತು ಸಹೋದರತೆಯನ್ನು ವರ್ಧಿಸುವುದಾಗಿದೆ. ಜ್ಞಾನವರ್ಧಕ ಕಾರ್ಯಕ್ರಮಗಳನ್ನು ಮತ್ತು ಸ್ಪರ್ಧೆಗಳನ್ನು ಈ ಉದ್ದೇಶ ಲಕ್ಷ್ಯದೊಂದಿಗೆ ಜರಗಿಸಬೇಕು. ನಾವು ಈ ವಿಷಯಗಳ ಬಗ್ಗೆ ಕಲಿತು ನಮ್ಮ ಜೀವಿತದ ಭಾಗಗಳನ್ನಾಗಿ ಮಾಡಬೇಕು. ಈ ಇಜ್ತಿಮಾಗಳಲ್ಲಿ ಕೆಲವು ದೈಹಿಕ ಸ್ಪರ್ಧೆಗಳ ಕಾರ್ಯಕ್ರಮ ಸಹ ಇರುತ್ತವೆ. ಏಕೆಂದರೆ **ಹುಖೂಖುಲ್ಲಾಹ್** (ಅಲ್ಲಾಹನಿಗೆ ಸಂಬಂಧಿಸಿದ ಹಕ್ಕುಗಳು) ಮತ್ತು **ಹುಖೂಖುಲ್ ಇಬಾದ್** (ಜನರಿಗೆ ಸಂಬಂಧಿಸಿದ ಹಕ್ಕುಗಳು) ಈಡೇರಿಸಿಕೊಡಲು ಆರೋಗ್ಯಶಾಲಿ ದೇಹದ ಆವಶ್ಯಕತೆ ಸಹ ಇರುತ್ತದೆ. ಹಾಗಲ್ಲದೆ ಅನ್‌ಸಾರುಲ್ಲಾ ಆಟೋಟಗಳನ್ನಾಡುವ ಪ್ರಾಯದವರಾಗಿರುವುದಿಲ್ಲ. ಅದೇ ರೀತಿ ಇಪ್ಪತ್ತೆರಡು ಇಪ್ಪತ್ತಮೂರು ವರ್ಷ ಪ್ರಾಯದ ನಂತರ ಸಾಮಾನ್ಯವಾಗಿ ಮಹಿಳೆಯರೂ ಸಹ ಆಟಗಳ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದುವುದಿಲ್ಲ. ವ್ಯಾಯಾಮಕ್ಕೆ ಸಂಬಂಧಿಸಿದ ಸ್ಪರ್ಧೆಗಳ ಉದ್ದೇಶ ತಮ್ಮ ಶರೀರದ ಆರೋಗ್ಯದ ಕಡೆಗೆ ಗಮನ ಹರಿಸುವುದಾಗಿದೆ. ಸ್ಪರ್ಧೆಗಳಲ್ಲಿ ಭಾಗವಹಿಸುವವರು ಮಾತ್ರವಲ್ಲ ಹಾಗೆ ಭಾಗವಹಿಸದವರು ಸಹ ನಡೆಯುವ ಅಥವಾ ಸರಳ ವ್ಯಾಯಾಮಗಳ ಮೂಲಕ ಯಾವಾಗಲೂ ತಮ್ಮ ಶರೀರವನ್ನು ಚುರುಕಾಗಿರಿಸಬೇಕು. ಒಟ್ಟಾರೆ ಹೇಳುವುದಾದರೆ ನಮ್ಮ ಇಜ್ತಿಮಾಗಳ ಉದ್ದೇಶ ನಮ್ಮ ಧಾರ್ಮಿಕ ಮತ್ತು ಜ್ಞಾನ ಸಂಬಂಧವಾದ ಸಾಮರ್ಥ್ಯಗಳನ್ನು ವರ್ಧಿಸುವ ಕಡೆಗೆ ಗಮನ ಹರಿಸುವುದಾಗಿದೆ.

ಅನ್‌ಸಾರುಲ್ಲಾ ಸದಸ್ಯರ ಪ್ರಾಯ ಎಂತಹದೆಂದರೆ ಆಗ ಅವರ ಯೋಚನೆಗಳು ಪಕ್ವವಾಗುತ್ತವೆ. ಅವರಿಗೆ ತಮ್ಮ ಹೊಣೆಗಾರಿಕೆಗಳ ಬಗ್ಗೆ ಪ್ರಜ್ಞೆ ಇರಬೇಕಾಗಿದೆ. ಅನ್‌ಸಾರುಲ್ಲಾದ ಸದಸ್ಯನಾದ ಪ್ರತಿಯೊಬ್ಬನು ಇಸ್ಲಾಮನ್ನು ಬಲಪಡಿಸಲು ಮತ್ತು ಅಹ್ಮದಿಯ್ಯತ್ತಿನಲ್ಲಿ ಸತ್ಯ ಹೃದಯದೊಂದಿಗೆ ಸ್ಥಿರವಾಗಿರಲು ಪ್ರಯತ್ನಿಸಬೇಕಾಗಿದೆ. ಆದರೆ ಇದು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸದೆ ಸಾಧ್ಯವಾಗದು. ಇದಕ್ಕೋಸ್ಕರ ಪ್ರತಿಯೊಬ್ಬ ಅಹ್ಮದಿ ಪ್ರಯತ್ನಮಾಡಬೇಕು. ಮತ್ತು ಅನ್‌ಸಾರುಲ್ಲಾ ಸದಸ್ಯರ ಮಟ್ಟ ಎಲ್ಲರಿಗಿಂತ ಉನ್ನತ ಮಟ್ಟದಲ್ಲಿರಬೇಕು. ಅಲ್ಲಾಹನೊಂದಿಗೆ ಸಂಬಂಧ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಸಂಬಂಧ ಸ್ಥಾಪಿಸುವ ತನಕ ಪೂರ್ಣವಾಗಲಾರದು. ಅದರ ಬಗ್ಗೆ ಅಲ್ಲಾಹನು ನಮಗೆ ಆಜ್ಞೆ ನೀಡಿದ್ದಾನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದುರೂದ್ ಮತ್ತು ಸಲಾಮ್ ಅರ್ಪಿಸುವ ಕಡೆಗೆ ಗಮನ ಹರಿಸಬೇಕು. ಇದು ಬಹಳ ಆವಶ್ಯಕವಾಗಿ ಮಾಡಬೇಕಾದ ಕಾರ್ಯವಾಗಿದೆ. ಅನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದುದಕ್ಕೆ ಸಂಬಂಧಿಸಿದ ನಮ್ಮ ಹೊಣೆಗಾರಿಕೆಗಳನ್ನು ನಿಭಾಯಿಸಬೇಕು. ಈ ಕಾಲಘಟ್ಟದಲ್ಲಿ ಇಸ್ಲಾಮಿನ ಪ್ರಚಾರವನ್ನು ಪರಿಪೂರ್ಣಗೊಳಿಸಲು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿದ್ದಾನೆ. ಇಸ್ಲಾಮಿನ ಪ್ರಚಾರ ಕಾರ್ಯದಲ್ಲಿ ಮತ್ತು ತಬ್ಲೀಗ್‌ನಲ್ಲಿ ಧಾರಾಳವಾಗಿ ಭಾಗವಹಿಸುವಾಗ ಮಾತ್ರ ನಾವು ಅಹ್ಮದಿಯ್ಯತ್‌ನಲ್ಲಿ ಸತ್ಯ ಹೃದಯದೊಂದಿಗೆ ನೆಲೆಗೊಂಡಿರುವೆವು ಎಂದು ಸಾಬೀತಾಗುವುದು. ಆ ರೀತಿ ನಾವು ನಮ್ಮನ್ನು ಅನ್‌ಸಾರುಲ್ಲಾ, ಅಲ್ಲಾಹನ ಸಹಾಯಕರು, ಎಂದು ಸಾಬೀತುಗೊಳಿಸುವೆವು. ಇದು ನಮ್ಮ ಹೊಣೆಗಾರಿಕೆಯಾಗಿದೆ.

ನೀವೆಲ್ಲರೂ ಮಾಡಿದ ಇನ್ನೊಂದು ಪ್ರತಿಜ್ಞೆ ಅಹ್ಮದಿಯಾ ಖಿಲಾಫತ್‌ನೊಂದಿಗೆ ನಿಷ್ಠೆಯ ಸಂಬಂಧವಿರಿಸುವೆವು ಮತ್ತು ಅದರ ಸಂರಕ್ಷಣೆಗೆ ಪ್ರಯತ್ನಿಸುವೆವು ಎಂದಾಗಿದೆ. ಈ ಪ್ರಯತ್ನ ಮಾಡುವುದು ಹೇಗೆ? ಅನ್‌ಸಾರುಲ್ಲಾದ ಸದಸ್ಯರು ಖಿಲಾಫತ್‌ನ ಕೆಲಸಗಳನ್ನು ಮತ್ತು ಕಾರ್ಯಕ್ರಮಗಳನ್ನು ನೆರವೇರಿಸಲು ಅದಕ್ಕೆ ಸಹಾಯಕರಾಗುವಾಗ ಮಾತ್ರವೇ ಇದು ಆಗುತ್ತದೆ. ಇದು ಸಾಧ್ಯವಾಗುವುದು ಅನ್‌ಸಾರುಲ್ಲಾ ಸದಸ್ಯರು ಆಯಾಕಾಲದ ಖಲೀಫರ ಮಾತುಗಳನ್ನು ಆಲಿಸುವ ಬಗ್ಗೆ ಲಕ್ಷ್ಯ ನೀಡುವಾಗ ಆಗಿದೆ. ಇದಕ್ಕೋಸ್ಕರ ಅಲ್ಲಾಹನು ನಮಗೆ **ಎಂ.ಟಿ.ಎ.** ಎಂಬ ಅನುಗ್ರಹ ದಯಪಾಲಿಸಿದ್ದಾನೆ. ಆದುದರಿಂದ ಅನ್‌ಸಾರುಲ್ಲಾ ಸದಸ್ಯರು ಅದರೊಂದಿಗೆ ಜೋಡಣೆ ಹೊಂದುವುದು ಆವಶ್ಯಕವಾಗಿದೆ. ಇದೇ ರೀತಿ ತಮ್ಮ ಮಕ್ಕಳನ್ನೂ ಅದರೊಂದಿಗೆ ಜೋಡಿಸಬೇಕು. ತಮ್ಮ ಮಕ್ಕಳನ್ನು ಖಿಲಾಫತ್‌ನೊಂದಿಗೆ ಜೋಡಿಸುವೆವು ಎಂದು ನೀವು ಪ್ರತಿಜ್ಞೆ ಮಾಡಿರುವಿರಿ. ಆದುದರಿಂದ ನಿಮ್ಮ ಮಕ್ಕಳನ್ನೂ ಸಹ ಅದರೊಂದಿಗೆ ಜೋಡಿಸುವಂತೆ ಮಾಡಿರಿ. ಆ ಮೂಲಕ ಪೀಳಿಗೆಯ ನಂತರ ಪೀಳಿಗೆಗಳಲ್ಲಿ ಈ ನಿಷ್ಠೆಯ ಸರಪಳಿ ಜಾರಿಯಲ್ಲಿರುವಂತಾಗಲಿ. ಹಾಗೆ ಇಸ್ಲಾಮಿನ ಸೇವೆ ಮತ್ತು ಇಸ್ಲಾಮಿನ ಪ್ರಚಾರದ ಕೆಲಸ ಯಾವಾಗಲೂ ಜಾರಿಯಲ್ಲಿರುವಂತಾಗಲಿ. ಏಕೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ವತಃ ಪ್ರಕಟಿಸಿದ ಪ್ರಕಾರ ಅವರ ನಂತರ **ದ್ವಿತೀಯ ದಿವ್ಯ ಶಕ್ತಿ**ಯ ಮೂಲಕ ಈ ಕೆಲಸ ಜಾರಿಯಲ್ಲಿರಬೇಕಾಗಿದೆ. **ದ್ವಿತೀಯ ದಿವ್ಯ ಶಕ್ತಿ (ಖುದ್‌ರತೆ ಸಾನಿಯ)** ಎಂದರೆ ನಿಝಾಮೆ ಖಿಲಾಫತ್ ಆಗಿದೆ. ಆದುದರಿಂದ ಅದಕ್ಕೋಸ್ಕರ ಪ್ರತಿಯೊಂದು ರೀತಿಯ ಬಲಿದಾನ ಅರ್ಪಿಸುವ ಬಗ್ಗೆ ದೃಷ್ಟಿಯಿರಿಸಿರಿ. ನೀವು ಬಲಿದಾನ ನೀಡುವುದಾಗಿ ಪ್ರತಿಜ್ಞೆ ಮಾಡಿರುವಿರಿ. ಅದರ ಬಗ್ಗೆ ಗಮನ

ಹರಿಸಿರಿ. ಅಲ್ಲಾಹನು ನಿಮಗೆಲ್ಲರಿಗೂ ಹಾಗೆ ಮಾಡುವ ಸೌಭಾಗ್ಯ ದಯಪಾಲಿಸಲಿ.

ನಾನು ಹೇಳಿದ ಹಾಗೆ, ಲಜ್‌ನ ಇಮಾಯಿಲ್ಲಾ ಇಜ್ತಿಮಾ ಸಹ ಜರಗುತ್ತಿದೆ. ಲಜ್‌ನ ಇಮಾಯಿಲ್ಲಾಹ್‌ದವರು ಸಹ ಒಂದು ಪ್ರತಿಜ್ಞೆ ಮಾಡಿದ್ದಾರೆ. ಅದನ್ನು ಅವರು ಯಾವಾಗಲೂ ತಮ್ಮ ಮುಂದೆ ಇರಿಸಬೇಕು. ಅಲ್ಲಾಹನ ಅನುಗ್ರಹದಿಂದ ಲಜ್‌ನದ ಬಹುತೇಕ ಮಹಿಳೆಯರು ಧರ್ಮದಲ್ಲಿ ನಿಷ್ಠೆಯಿಂದ ನೆಲೆನಿಂತಿದ್ದಾರೆ. ನಂಬಿಕೆಗೆ ಸಂಬಂಧಿಸಿ ಬಹುತೇಕ ಮಹಿಳೆಯರು ಬಲಿಷ್ಠರಾಗಿದ್ದಾರೆ. ಹಾಗೆಯೇ ಅವರು ತಮ್ಮ ಕರ್ಮಾನುಷ್ಠಾನಗಳನ್ನು ಸಹ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳ ಮಟ್ಟಕ್ಕೆ ತರಬೇಕಾಗಿದೆ. ಲಜ್‌ನದವರು ಸಹ ಒಂದು ಪ್ರತಿಜ್ಞೆ ಮಾಡಿದ್ದಾರೆ. ನಾವು ನಮ್ಮ ಧರ್ಮಕ್ಕೋಸ್ಕರ ಪ್ರತಿಯೊಂದು ಬಲಿದಾನಕ್ಕೆ ಸಿದ್ಧರಾಗುವೆವು ಎಂದು. ಇಸ್ಲಾಮ್ ಧರ್ಮ ಆವಶ್ಯಪಡುವ ಪ್ರಥಮ ಬಲಿದಾನವೆಂದರೆ ನಿಮ್ಮ ಲೌಕಿಕ ಆಶಾಭಿಲಾಷೆಗಳನ್ನು ಹಿಂದೆ ಸರಿಸಿ ನಿಮ್ಮ ಕರ್ಮಗಳನ್ನು ಧರ್ಮದ ಉಪದೇಶಗಳ ಪ್ರಕಾರ ಮಾಡಬೇಕು. ಓರ್ವ ಅಹ್ಮದಿ ಮಹಿಳೆಯಲ್ಲಿ ಸತ್ಯದ ಮಟ್ಟ ಉನ್ನತವಾಗಿರಬೇಕು. ಮಹಿಳೆಯರಿಗೆ ಸಂಬಂಧಿಸಿದ ಆಜ್ಞೆಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಬೇಕು. ಮಹಿಳೆಯರ ಪರಿಶುದ್ಧಿ ಮತ್ತು ಚಾರಿತ್ರ್ಯ ರಕ್ಷಣೆಗೆ ಸಂಬಂಧಿಸಿ ಅಲ್ಲಾಹನು ನೀಡಿದ ಆಜ್ಞೆಗಳಲ್ಲಿ ಪರದೆಯ ಪಾಲನೆ ಬಹಳ ಮುಖ್ಯವಾಗಿದೆ. ಇದಕ್ಕೆ ಸಂಬಂಧಿಸಿ ಅಹ್ಮದಿ ಮಹಿಳೆಯಲ್ಲಿ ಬಲಹೀನತೆ ಇದ್ದರೆ ಆ ಮಹಿಳೆ ತನ್ನ ಪ್ರತಿಜ್ಞೆಯನ್ನು ಕ್ರಿಯಾರೂಪಕ್ಕೆ ತರುವುದಿಲ್ಲ ಎಂದರ್ಥ. ಸಮಾಜದ ಬಗ್ಗೆ ಭಯವಾಗಲಿ ಲೌಕಿಕ ಅಭಿಲಾಷೆಗಳಾಗಲಿ ಓರ್ವ ಅಹ್ಮದಿಯನ್ನು ಧರ್ಮದ ಆಜ್ಞೆಗಳಿಂದ ದೂರ ಸರಿಸುವುದಾಗಿರಬಾರದು. ಪ್ರತಿಯೊಬ್ಬ ಅಹ್ಮದಿ ಮಹಿಳೆ ಅಲ್ಲಾಹನು ನೀಡಿದ ಆಜ್ಞೆಗಳ ಪ್ರಕಾರ ಜೀವಿಸುವವಳಾಗಬೇಕು.

ಅವರ ಇನ್ನೊಂದು ಪ್ರತಿಜ್ಞೆ ಯಾವಾಗಲೂ ಸತ್ಯದಲ್ಲಿ ನೆಲೆಗೊಳ್ಳುವುದಾಗಿ ಮಾಡಿದ ಪ್ರತಿಜ್ಞೆಯಾಗಿದೆ. ಪ್ರತಿಯೊಬ್ಬರೂ ಇದಕ್ಕೆ ಸಂಬಂಧಿಸಿ ತನ್ನ ಮಟ್ಟವನ್ನು ನೋಡುವ ಆವಶ್ಯಕತೆ ಇದೆ – ನಾವು ಸತ್ಯದ ಮೇಲೆ ವಾಸ್ತವಿಕವಾಗಿ ನೆಲೆನಿಂತಿರುವೆವೋ ಇಲ್ಲವೋ ಎಂದು. ಇದೇ ರೀತಿ ಮಕ್ಕಳಿಗೆ ತರಬೇತಿ ನೀಡುವ ಪ್ರತಿಜ್ಞೆ ಇದೆ. ಅದನ್ನು ಸಹ ಪರಿಪೂರ್ಣವಾಗಿ ಈಡೇರಿಸಲು ಪ್ರಯತ್ನ ಮಾಡಬೇಕು. ಖಿಲಾಫತ್‌ನೊಂದಿಗೆ ಮಕ್ಕಳನ್ನು ಜೋಡಿಸುವುದು ಮತ್ತು ಅದಕ್ಕೋಸ್ಕರ ಪ್ರಯತ್ನ ಮಾಡುವುದು ತಂದೆಯಂದಿರ ಹೊಣೆಗಾರಿಕೆಯಾಗಿರುವ ಹಾಗೆಯೇ ತಾಯಂದಿರ ಹೊಣೆಗಾರಿಕೆಯೂ ಆಗಿದೆ. ಆದುದರಿಂದ ಈ ಪ್ರಮುಖ ಹೊಣೆಗಾರಿಕೆಯನ್ನು ಪ್ರತಿಯೊಬ್ಬ ತಾಯಿ ಮನವರಿಕೆ ಮಾಡಿಕೊಳ್ಳಬೇಕಾಗಿದೆ. ಅಲ್ಲಾಹನು ಅವರಿಗೆ ಹಾಗೆ ಮಾಡಲು ಭಾಗ್ಯ ದಯಪಾಲಿಸಲಿ.

ಲಜ್‌ನದೊಂದಿಗೆ ನಾಸಿರಾತ್‌ಗಳ ಇಜ್ತಿಮಾ ಸಹ ಜರಗುತ್ತಲಿದೆ. ನಾಸಿರಾತ್‌ಗಳು ಸಹ ಪ್ರತಿಜ್ಞೆ ಮಾಡುತ್ತಾರೆ. ಅವರು ಸಹ ತಮ್ಮ ಪ್ರತಿಜ್ಞೆ ಈಡೇರಿಸಬೇಕು. ಹದಿನಾಲ್ಕು ಹದಿನೈದು ವರ್ಷದ ಪ್ರಾಯ ಪ್ರಜ್ಞೆ ಹುಟ್ಟುವ ಪ್ರಾಯವಾಗಿದೆ. ಒಳ್ಳೆಯದು ಯಾವುದು ಕೆಟ್ಟದು ಯಾವುದು ಎಂದು ಮನವರಿಕೆ ಮಾಡಲು ಸಾಧ್ಯವಾಗುವ ಪ್ರಾಯವಾಗಿದೆ. ಈ ಪ್ರಾಯದವರಲ್ಲಿ ಬಹಳಷ್ಟು ಅಭಿಲಾಷೆಗಳು ಸಹ ಇರುತ್ತವೆ. ಲೋಕದ ಸುಖಗಳ ಕಡೆಗೆ ದೃಷ್ಟಿ ಹಾಯಿಸಿದರೆ ಲೌಕಿಕ ಅಭಿಲಾಷೆಗಳು ಧರ್ಮದ ಮೇಲೆ ಆವರಿಸುತ್ತದೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿ ಬಾಲಿಕೆ ಬಹಳ ಜಾಗರೂಕತೆ ವಹಿಸುವುದು ಆವಶ್ಯಕವಾಗುತ್ತದೆ. ತನ್ನ ಪ್ರತಿಜ್ಞೆಯನ್ನು ಪದೇ ಪದೇ ನೆನಪಿಸುವ ಆವಶ್ಯಕತೆ ಇದೆ. ಹೀಗೆ ಮಾಡಿದರೆ ಮಾತ್ರ ಅಹ್ಮದಿ ಬಾಲಿಕೆ ವ್ಯರ್ಥವಾದ ಲೌಕಿಕ ಅಭಿಲಾಷೆಗಳನ್ನು ಹಿಂಬಾಲಿಸುವುದಕ್ಕೆ ಬದಲಾಗಿ ಉನ್ನತ ಉದ್ದೇಶಲಕ್ಷ್ಯವನ್ನು ತಲಪಲು ಪ್ರಯತ್ನಿಸುವವಳಾಗುವಳು. ಆ ಉನ್ನತ ಉದ್ದೇಶಲಕ್ಷ್ಯಗಳು ನಾಸಿರಾತ್‌ಗಳ ಪ್ರತಿಜ್ಞೆಯಲ್ಲಿ ವಿವರಿಸಲಾಗಿದೆ.

ಇಜ್‌ತಿಮಾಗಳ ಈ ಸಂಕ್ಷಿಪ್ತ ವಿವರಣೆಯ ನಂತರ ಈಗ ನಾನು, ನಮ್ಮಿಂದ ಬೇರ್ಪಟ್ಟು ಹೋದ ಓರ್ವ ಪ್ರಿಯ ಬಾಲಕನ ಕುರಿತು ಪ್ರಸ್ತಾಪಿಸುವೆನು. ಆ ಪ್ರಿಯ ಬಾಲಕನ ಹೆಸರು ಮರ್ಝ್‌ಹರ್ ಹಸನ್ ಎಂದಾಗಿದೆ. ರೋಗಬಾಧಿತನಾಗಿದ್ದ ಕಾರಣ ಕೊನೆಯ ವರ್ಷದ ಪರೀಕ್ಷೆಗೆ ಹಾಜರಾಗಿರಲಿಲ್ಲ. ಆದರೆ ಆ ಪ್ರಿಯ ತರುಣ ಜೀವಿಸಿದ ರೀತಿ, ಅವನು ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದರೂ ಉತ್ತೀರ್ಣನಾಗದೆ ಇದ್ದರೂ, ಒಬ್ಬ ಮುರಬ್ಬಿ ಮತ್ತು ಮುಬಲ್ಲಿಗನದಾಗಿತ್ತು. ಅಲ್ಲಾಹನು ಆ ತರುಣನಲ್ಲಿ ಒಂದು ಉತ್ಸಾಹ ಉಂಟುಮಾಡಿದ್ದನು. ಧರ್ಮದ ಸೇವೆ ಹೇಗೆ ಮಾಡಬೇಕು ಯಾವ ರೀತಿ ತನ್ನ ಸ್ವಭಾವಗುಣಗಳನ್ನು ಮತ್ತು ಸ್ಥಿತಿಯನ್ನು ಅಲ್ಲಾಹನ ಆಜ್ಞೆ ಪ್ರಕಾರ ಪರಿವರ್ತಿಸಬೇಕು ಹೇಗೆ ಅನುಷ್ಠಿಸಬೇಕು ಎಂಬುದೇ ಅವನ ಚಿಂತೆಯಾಗಿತ್ತು. ಈ ಲೋಕಕ್ಕೆ ಆಗಮಿಸಿದ ಪ್ರತಿಯೊಬ್ಬ ಇಲ್ಲಿಂದ ಮರಳಿ ಹೋಗಲಿಕ್ಕಿದೆ. ಆದರೆ ಅಲ್ಲಾಹನ ಇಚ್ಚೆಗೆ ಅನುಸಾರವಾಗಿ ತಮ್ಮ ಕರ್ಮಗಳನ್ನು ಮಾಡಲು ಪ್ರಯತ್ನಿಸುವವರು ಮತ್ತು ಅದರಲ್ಲಿ ಜಯಶಾಲಿಗಳಾಗುವವರು ಅದೃಷ್ಟಶಾಲಿಗಳಾಗಿದ್ದಾರೆ.

ಈ ಪ್ರಿಯ ತರುಣನ ಬಗ್ಗೆ ಜಾಮಿಅದ ವಿದ್ಯಾರ್ಥಿಗಳೂ ಅಧ್ಯಾಪಕರೂ ನನಗೆ ಬರೆದಿದ್ದಾರೆ. ಅವುಗಳು ಒಬ್ಬ ವ್ಯಕ್ತಿ ಮೃತನಾದ ಕಾರಣ ಒಳ್ಳೆಯ ಮಾತು ಹೇಳಬೇಕೆಂದು ವಾಡಿಕೆಯ ಪ್ರಕಾರ ಬರೆದ ಮಾತುಗಳಲ್ಲ. ನನಗೆ ಆ ತರುಣನ ಬಗ್ಗೆ ವೈಯ್ಯಕ್ತಿಕವಾಗಿ ಪರಿಚಯವಿದೆ. ಅವನು ನಿಷ್ಠೆ ಮತ್ತು ಕರ್ಮಗಳಲ್ಲಿ ಒಂದು ಉದಾಹರಣೆಯಾಗಿದ್ದನು. ಅಲ್ಲಾಹನು ಅವನ ಆಧ್ಯಾತ್ಮಿಕ ಪದವಿ ವರ್ಧಿಸುತ್ತಾ ಇರಲಿ. ಆ ತರುಣ ತನ್ನ ತಂದೆ ತಾಯಿಯ ಏಕ ಮಾತ್ರ ಗಂಡು ಮಗನಾಗಿದ್ದನು. ಅವನಿಗೆ ಇಬ್ಬರು ಸಹೋದರಿಯರಿದ್ದಾರೆ. ತಂದೆ ತಾಯಿ, ವಿಶಿಷ್ಟವಾಗಿ ತಾಯಿ, ಸಹನೆಯಿಂದ ವರ್ತಿಸಿ ಅಲ್ಲಾಹನ ಇಷ್ಟದ ಬಗ್ಗೆ ಸಮ್ಮತಿ ಸೂಚಿಸುವ ಅತ್ಯುತ್ತಮ ಉದಾಹರಣೆ ತೋರಿಸಿದರು. ಅಲ್ಲಾಹನು ಅವರಿಗೆ ಪ್ರತಿಫಲ ನೀಡಲಿ ಮತ್ತು ಅವರ ಸಹನೆ ವರ್ಧಿಸುತ್ತಾ ಇರಲಿ. ಅವರೆಲ್ಲರಿಗೂ ಅಲ್ಲಾಹನು ಸಮಾಧಾನ ಮತ್ತು ಸಹನೆ ನೀಡುವಂತಾಗಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಬರೆದಿದ್ದಾರೆ: ನೀವು ನೆನಪಿಡಿರಿ.

ಕಷ್ಟದ, ದುಃಖದ ವೇಳೆಯಲ್ಲಿ ಸಾಂತ್ವನ ಮತ್ತು ಸಮಾಧಾನ ಲಭಿಸಲು ಅಲ್ಲಾಹನ ಮೇಲೆ ಭರವಸೆ ಇಡುವುದಕ್ಕಿಂತಲೂ ಮಿಗಿಲಾದ ಬೇರೆ ಯಾವುದೇ ಲೇಪನ ಇರುವುದಿಲ್ಲ. ಆದುದರಿಂದ ಯಾವಾಗಲೂ ಅಲ್ಲಾಹನ ಮೇಲೆಯೇ ಭರವಸೆ ಇಡಬೇಕಾಗಿದೆ.

ಈ ತರುಣನಿಗೆ ಕ್ಯಾನ್ಸರ್ ಆಗಿತ್ತು. ಚಿಕಿತ್ಸೆ ನಡೆಸಿದಾಗ ಅಲ್ಲಾಹನ ಅನುಗ್ರಹದಿಂದ ರೋಗ ಉಪಶಮನವಾಗಿತ್ತು. ಆದರೆ ಅನಂತರ ಎದೆಯಲ್ಲಿ ಇನ್‌ಫೆಕ್ಷನ್ (ಸೋಂಕು) ತಗಲಿತು. ಅದನ್ನು ಗೊತ್ತು ಹಚ್ಚಲು ಡಾಕ್ಟರ್‌ಗಳಿಗೆ ಸಾಧ್ಯವಾಗಲಿಲ್ಲ. ಆ ಕಾರಣದಿಂದ ಮೃತರಾದರು. **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ಮೃತನ ಅಜ್ಜನ ತಂದೆ ಹಝ್ರತ್ ಮಿಸ್ತ್ರಿ ನಿಝಾಮುದ್ದೀನ್ ಸಾಹೇಬ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾಗಿದ್ದರು. ಅವರ ತಾಯಿಯ ತಂದೆ ಚೌಧುರಿ ಮುನವ್ವರ್ ಅಲಿ ಖಾನ್ ಸಾಹೇಬ್ ಮತ್ತು ಅಜ್ಜ ಹಾಜಿ ಮನ್‌ಝೂರ್ ಅಹ್ಮದ್ ಸಾಹೇಬ್, ಇವರಿಬ್ಬರೂ ಖಾದಿಯಾನಿನ ದರ್ವೇಶ್‌ಗಳಾಗಿದ್ದರು.

ಮೃತನ ತಾಯಿ ಹೇಳುತ್ತಾರೆ: ನನ್ನ ಮಗ ನನಗೆ ಸಲಹೆ ನೀಡುವವನೂ, ನನ್ನ ಇಂಗಿತಗಳನ್ನು ಅರಿತವನೂ, ಒಬ್ಬ ಅಧ್ಯಾಪಕನ ಹಾಗೆ ನನಗೆ ತರಬೇತಿ ನೀಡುವವನೂ ಆಗಿದ್ದನು. ನಾನು ಇಷ್ಟಪಡುವುದು ಏನು, ನನಗೆ ಇಷ್ಟವಿಲ್ಲದ್ದು ಏನು ಎಂದು ಅವನಿಗೆ ತಿಳಿದಿತ್ತು. ಅವನು ಹೆಚ್ಚಾಗಿ ನನ್ನೊಂದಿಗೆ ನಿಝಾಮೆ ಖಿಲಾಫತ್, ಖಲೀಫ, ಜಮಾಅತ್ ಕುರಿತು ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಅವರ ಶಿಷ್ಯರ ಕುರಿತು, ಅವರ ಸತ್ಯಸಂಧನಾದ ಪ್ರೇಮಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕುರಿತು ಮಾತನಾಡುತ್ತಿದ್ದನು. ಈ ವಿಷಯಗಳೇ ಅವನಿಗೆ ಇಷ್ಟಕರವಾಗಿದ್ದುವು. ಯಾವುದಾದರೂ ಲೌಕಿಕ ವಿಷಯಗಳು ಮಧ್ಯದಲ್ಲಿ ಪ್ರಸ್ತಾಪಿಸಲ್ಪಟ್ಟರೆ, ಅವುಗಳ ವಿಷಯ ಬಿಡಿರಿ. ನಮಗೆ ಅವುಗಳೇಕೆ ಎಂದು ಹೇಳುತ್ತಿದ್ದನು.

ರೋಗಬಾಧಿತನಾದಾಗ ಅವನ ಸ್ವಭಾವ ಬಹಳ ಮೃದುವಾಗಿತ್ತು. ಅವನು ಎಂದೂ ಬೇಸರ ಮತ್ತು ಕೋಪ ಪ್ರಕಟಿಸಲಿಲ್ಲ. ಅವನಿಗೆ ಬಾಧಿಸಿದ ರೋಗ ಮೊದಲು ವಾಸಿಯಾದಾಗ ಅವನು ಸ್ಕಾಟ್‌ಲೇಂಡಿನ ಅಮೀರ್ ಸಾಹಿಬರೊಂದಿಗೆ ಹೇಳಿದನು: ನನಗೆ ಜಮಾಅತಿನ ಯಾವುದಾದರೂ ಕೆಲಸ ಕೊಡಿರಿ ಎಂದು. ಸ್ಕಾಟ್‌ಲೇಂಡಿನಲ್ಲಿ ನಾಸಿರಾತ್ ಮತ್ತು ಲಜ್‌ನದ ಇಜ್ತಿಮಾ ಜರಗಿದಾಗ ಅಲ್ಲಿ ವಿಜೇತರಿಗೆ ನೀಡುವ ಪ್ರಶಸ್ತಿ ಪತ್ರಗಳನ್ನು ಡಿಸೈನ್ ಮಾಡಿದ್ದು ಈತನೇ. ಅವನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡುತ್ತಿದ್ದನು. ಆಸ್ಪತ್ರೆಯಲ್ಲಿದ್ದಾಗ ನಮಾಝ್, ತಿಲಾವತ್, ಮಾಡುತ್ತಿದ್ದನಲ್ಲದೆ ಎಂ.ಟಿ.ಎ ಮೂಲಕ ಖುತ್‌ಬಗಳನ್ನು ಆಲಿಸುತ್ತಿದ್ದನು. ಡಾಕ್ಟರ್‌ಗಳಿಗೆ ಪೀಸ್ ಕಾನ್‌ಫರೆನ್ಸ್, ಜಲ್ಸ ಮತ್ತು ವಿವಿಧ ಕಾರ್ಯಕ್ರಮಗಳ ಬಗ್ಗೆ ತಿಳಿಸಿ ಯಾವಾಗಲೂ ತಬ್ಲೀಗ್ ಮಾಡುತ್ತಿದ್ದನು.

ಜಲ್ಸ ಸಾಲಾನದ ನಂತರ ಇಲ್ಲಿ ಮುರಬ್ಬಿಗಳ ಮೀಟಿಂಗ್ ನಡೆಸಲಾಗಿತ್ತು. ಮೃತನ ಕ್ಲಾಸಿನಲ್ಲಿ ಉತ್ತೀರ್ಣರಾದವರು ಆ ಮೀಟಿಂಗ್‌ನಲ್ಲಿ ಭಾಗವಹಿಸಿದ್ದರು. ಅವರಿಗೆ ಮೃತನು ತಿಳಿಸಿದ್ದನು– ಆ ಮೀಟಿಂಗ್‌ನಲ್ಲಿ ಚರ್ಚೆಯಾದ ಅಂಶಗಳನ್ನು ನನಗೆ ತಿಳಿಸಿರಿ ಎಂದು. ನಾನು ಅವುಗಳನ್ನು ನನ್ನ ಜೀವಿತದಲ್ಲಿ ಅಳವಡಿಸಿಕೊಳ್ಳುವೆನು ಎಂದು ಹೇಳಿದ್ದನು. ಮೃತನಿಗೆ ಖಿಲಾಫತ್‌ನೊಂದಿಗೆ ಬಹಳ ಪ್ರೀತಿ ಇತ್ತು. ಕಿಮೋಥೆರಪಿ ಚಿಕಿತ್ಸೆ ನೀಡುತ್ತಿದ್ದಾಗ ಸಹ ಮೃತನು ಡಾಕ್ಟರ್‌ಗಳಿಗೆ ತಬ್ಲೀಗ್ ಮಾಡುತ್ತಿದ್ದನು. ಅವನಿಗೆ ಅಲ್ಲಾಹನ ಮೇಲೆ ಬಹಳ ಭರವಸೆ ಇತ್ತು. ಅಲ್ಲಾಹನು ನನ್ನನ್ನು ನಾಶಮಾಡಲಿಕ್ಕಿಲ್ಲ ಎಂದು ಯಾವಾಗಲೂ ಹೇಳುತ್ತಿದ್ದನು. ಅಂತೂ ಅಲ್ಲಾಹನು ಅವನನ್ನು ಇಲ್ಲಿಂದ ಕರೆದುಕೊಂಡು ಹೋದನು. ಪರಲೋಕದಲ್ಲಿ ಇನ್‌ಶಾಅಲ್ಲಾಹ್ ಅವನ ಆಶೆಗಳು ಈಡೇರುತ್ತಿರಬಹುದು.

ಡಾಕ್ಟರ್ ಹಫೀಝ್ ಹೇಳುತ್ತಾರೆ: ಮಝ್‌ಹರ್‌ನಿಗೆ ಕ್ಯಾನ್ಸರ್ ಆಗಿದೆ ಎಂದು ತಿಳಿದ ನಂತರ ನಾನು ಗ್ಲಾಸ್‌ಗೋ ನಗರಕ್ಕೆ ಅವನನ್ನು ಕಾಣಲು ಹೋದಾಗ ಬಹಳ ಭರವಸೆ ಹೊಂದಿದ ಮನುಷ್ಯನಾಗಿ ಕಂಡೆನು. ಅವನ ತಾಯಿ ಹೇಳಿದರು: ಅವನು ಯಾವಾಗಲೂ ಹೇಳುತ್ತಾ ಇರುತ್ತಾನೆ. ಅಲ್ಲಾಹನು ನೀಡಿದ ಅನುಗ್ರಹಗಳನ್ನು ಯಾವಾಗಲೂ ಸ್ಮರಿಸುತ್ತಾ ಇರಬೇಕು ಎಂದು. ಹಾಫಿಝ್ ಫಝ್ಲ್ ರಬ್ಬೀ ಸಾಹಿಬ್ ಹೇಳುತ್ತಾರೆ: ಮೃತನಿಗೆ ಪವಿತ್ರ ಖುರ್‌ಆನ್ ಕಲಿಯಲು ಬಹಳ ಉತ್ಸಾಹವಿತ್ತು. ಅವನು ಬಹಳ ಇಂಪಾಗಿ ಪವಿತ್ರ ಖುರ್‌ಆನ್ ಪಾರಾಯಣ ಮಾಡುತ್ತಿದ್ದನು. ಜಾಮಿಅಕ್ಕೆ ಪ್ರವೇಶಿಸುವ ಮೊದಲು ನೇಶನಲ್ ತಅಲೀಮುಲ್ ಖುರ್‌ಆನ್ ಕ್ಲಾಸ್‌ನಲ್ಲಿ ಭಾಗವಹಿಸಲು ತನ್ನ ಕುಟುಂಬದವರೊಂದಿಗೆ ಗ್ಲಾಸ್‌ಗೋದಿಂದ ಲಂಡನ್‌ಗೆ ಆಗಮಿಸುತ್ತಿದ್ದನು.

ಎಮಿಗ್ರೇಶನ್‌ಗೆ ಸಂಬಂಧಿಸಿ ಕೆಲವು ಸಮಸ್ಯೆಗಳಿದ್ದುವು. ಅದರ ಪ್ರಕರಣ ಮುಗಿದಿರಲಿಲ್ಲ. ಆ ಕಾರಣದಿಂದ ಅವರು ಜಾಮಿಅದ ವಿದ್ಯಾರ್ಥಿಯಾಗಿದ್ದರೂ ಪ್ರತಿ ಎರಡು ವಾರಕ್ಕೊಮ್ಮೆ ಗ್ಲಾಸ್‌ಗೋಗೆ ಮರಳಿ ಹೋಗಬೇಕಾಗುತ್ತಿತ್ತು. ನಾನು ಹೇಳಿದೆ: ನಿಮಗೆ ಬಹಳ ಕಷ್ಟವಾಗುತ್ತಿರಬಹುದು ಎಂದು. ಆಗ ಅವರು ಹೇಳಿದರು: ಒಂದು ಹಿರಿದಾದ ಉದ್ದೇಶಕ್ಕಾಗಿ ಅನುಭವಿಸುವ ಚಿಕ್ಕಪುಟ್ಟ ಕಷ್ಟಗಳು ವಾಸ್ತವದಲ್ಲಿ ಕಷ್ಟಗಳಾಗಿರುವುದಿಲ್ಲ.

ಜಾಮಿಅ ಅಹ್ಮದಿಯಾದ ಅಧ್ಯಾಪಕ ವಸೀಮ್ ಫಝ್ಲ್ ಸಾಹೇಬ್ ಹೇಳುತ್ತಾರೆ: ಮಝ್‌ಹರ್ ಅಹ್‌ಸನ್ ಬಹಳ ಧೈರ್ಯಶಾಲಿಯೂ ಸಜ್ಜನನೂ ಆಗಿದ್ದರು. ಅಧ್ಯಾಪಕರಿಗೆ ಗೌರವ ನೀಡುವವರೂ ಸ್ಥಿರಚಿತ್ತನಾದ ವಿದ್ಯಾರ್ಥಿಯೂ ಆಗಿದ್ದರು. ತಮ್ಮ ಹೊಣೆಗಾರಿಕೆಗಳನ್ನು ಅತ್ಯಂತ ನಿಷ್ಠೆಯಿಂದಲೂ ಪ್ರೀತಿಯಿಂದಲೂ ತ್ಯಾಗ ಮನೋಭಾವದಿಂದಲೂ ಈಡೇರಿಸುವ ವಿದ್ಯಾರ್ಥಿಗಳಲ್ಲಿ ಒಬ್ಬರಾಗಿದ್ದರು. ವ್ಯವಸ್ಥೆ ಮಾಡುವ ನೈಪುಣ್ಯತೆ ಅವರಲ್ಲಿತ್ತು.

ಹಾಫಿಝ್ ಮಶ್‌ಹೂದ್ ಸಾಹೇಬ್ ಹೇಳುತ್ತಾರೆ: ಸ್ವಲ್ಪ ಸಮಯದ ಹಿಂದೆ ಮಝ್‌ಹರ್‌ನೊಂದಿಗೆ ಮಾತನಾಡಿದಾಗ ಅವನು ಹೇಳಿದನು: ನಾನು ಬೇಗನೆ ರೋಗಮುಕ್ತನಾಗಿ ಮುಬಲ್ಲಿಗನಾಗಿ ಧರ್ಮದ ಸೇವೆ ಮಾಡಲು ಇಚ್ಛಿಸುತ್ತೇನೆ.

ಈಗ ನನಗೆ ಚಿಕಿತ್ಸೆ ಜಾರಿಯಲ್ಲಿರುವುದರಿಂದ ನಾನು ಸ್ಥಳೀಯ ಜಮಾಅತಿನ ಕೆಲಸ ಮಾಡಲು ಪ್ರಾರಂಭಿಸಿದ್ದೇನೆ.

ಮಲಿಕ್ ಅಕ್‌ರಮ್, ಮುರಬ್ಬಿ ಬರೆಯುತ್ತಾರೆ: ಮರ್ಝ್‌ಹರ್ ಅಹ್‌ಸನರ ಕುಟುಂಬ ದುಬೈಯಿಂದ ಗ್ಲಾಸ್‌ಗೋಗೆ ಆಗಮಿಸಿದಾಗ ನಾನು ಸ್ಕಾಟ್‌ಲೇಂಡಿನ ಮುಬಲ್ಲಿಗ್ ಆಗಿದ್ದೆ. ಈ ಕುಟುಂಬ ಗ್ಲಾಸ್‌ಗೋಗೆ ಆಗಮಿಸಿದ ದಿನ ಮಸ್‌ಜಿದ್‌ನಲ್ಲಿ ಯಾವುದೋ ಕಾರ್ಯಕ್ರಮ ನಡೆಯುತ್ತಿತ್ತು. ಆ ಕುಟುಂಬದ ಸದಸ್ಯರೂ ಅದರಲ್ಲಿ ಭಾಗವಹಿಸಿದರು. ನಾನು ನೋಡಿದೆ ಮರ್ಝ್‌ಹರ್ ಅಹ್‌ಸನ್, ಸಲಾಮ್ ಹೇಳಿದ ನಂತರ ನೇರವಾಗಿ ಕಿಚನ್‌ಗೆ ಹೋದರು. ಕಿಚನ್ ಟೀಮ್‌ನೊಂದಿಗೆ ಎಲ್ಲ ಕೆಲಸಗಳನ್ನು ಕಷ್ಟಪಟ್ಟು ಮಾಡಿದರು. ಮೊದಲನೆಯ ದಿನದಿಂದ ತೊಡಗಿ ಅವರು ಜಾಮಿಅದಲ್ಲಿ ಪ್ರವೇಶಿಸುವ ತನಕ ಮಸ್‌ಜಿದ್ ಮತ್ತು ಜಮಾಅತಿನ ಸೇವೆಯಲ್ಲಿ ಮಗ್ನರಾಗಿದ್ದರು. ಅವರು ಬಹಳ ಕಡಿಮೆ ಮಾತನಾಡುವವರಾಗಿದ್ದರು. ಬಾಹ್ಯವಾಗಿ ಸ್ವಚ್ಛವಾಗಿದ್ದರು ಆಂತರಿಕವಾಗಿಯೂ ಸ್ವಚ್ಛವಾಗಿದ್ದರು. ಅವರು ಹರಟೆಗಳಲ್ಲಿ ಭಾಗವಹಿಸಿ ಸಮಯ ಹಾಳು ಮಾಡುತ್ತಿರಲಿಲ್ಲ. ಅವರಿಗೆ ಸಮಯವನ್ನು ಸರಿಯಾಗಿ ಬಳಸುವ ರೀತಿ ತಿಳಿದಿತ್ತು. ಅವರ ಹೃತ್ಪೂರ್ವಕ ಆಶೆ ಅವರ ವಕ್ಫ್ ಅಂಗೀಕರಿಸಲ್ಪಡಬೇಕು ಎಂದಾಗಿತ್ತು. ಜಾಮಿಅದಲ್ಲಿ ಪ್ರವೇಶಿಸಿ ಮುಬಲ್ಲಿಗ್ ಆಗಿ ಧರ್ಮದ ಸೇವೆ ಮಾಡಬೇಕೆಂದಾಗಿತ್ತು. ಅವರಿಗೆ ಜಾಮಿಅದಲ್ಲಿ ಪ್ರವೇಶ ದೊರೆತಾಗ ಅವರು ಬಹಳ ಸಂತೋಷಗೊಂಡು ಲೋಕದ ಐಶ್ವರ್ಯವೆಲ್ಲ ಲಭಿಸಿದ ಹಾಗೆ ಇದ್ದರು.

ಅವರ ಕ್ಲಾಸ್‌ಫೆಲೋ ಆಗಿದ್ದ ಶೇಖ್ ಸಮರ್ ಈಗ ಮುರಬ್ಬಿಯಾಗಿದ್ದಾರೆ. ಅವರು ಹೇಳುತ್ತಾರೆ: ಅಹ್‌ಸನ್ ಯಾವಾಗಲೂ ಮುಗುಳು ನಗುತ್ತಾ ಎಲ್ಲರನ್ನೂ ಸಂತೋಷಪಡಿಸುತ್ತಾ ಇದ್ದರು. ಯಾರೊಂದಿಗೂ ಜಗಳಾಡುತ್ತಿರಲಿಲ್ಲ. ಹೃದಯ ಬಹಳ ವಿಶಾಲವಾಗಿತ್ತು. ಅವರು ಪ್ರತಿ ಸಂದರ್ಭದಲ್ಲಿ ತಬ್ಲೀಗ್ ಮಾಡುತ್ತಿದ್ದರು. ತಬ್ಲೀಗ್ ಮಾಡುವ ಸಂದರ್ಭ ಕಳೆದುಕೊಳ್ಳುತ್ತಿರಲಿಲ್ಲ. ಅವರು ಆಸ್ಪತ್ರೆಯಲ್ಲಿದ್ದಾಗ ಒಬ್ಬ ಮುಸ್ಲಿಮ್ ತಬ್ಲೀಗ್ ಮಾಡುತ್ತಿದ್ದಾನೆಂದು ಪ್ರಸಿದ್ಧವಾಗಿತ್ತು. ಅವರ ಕಾರಣದಿಂದ ಯಾರಿಗೂ ಕಷ್ಟವಾಗಲಿಲ್ಲ. ಯಾರನ್ನೂ ಅವರು ನಿಂದಿಸಿರಲಿಲ್ಲ. ಅನ್ಯರಿಗೆ ಸಾಧ್ಯವಿರುವಷ್ಟು ಸಹಾಯ ಮಾಡುತ್ತಿದ್ದರು. ಚಿಕ್ಕ ವಿಷಯವನ್ನು ಲಕ್ಷಿಸುತ್ತಿದ್ದರು. ಅವರು ಪ್ರತಿಯೊಬ್ಬನೊಂದಿಗೂ ಪ್ರೀತಿಯಿಂದ ವರ್ತಿಸುತ್ತಿದ್ದರು.

ಅವರ ಮತ್ತೋರ್ವ ಕ್ಲಾಸ್‌ಫೆಲೋ ಸಾಹಿರ್ ಮಹ್‌ಮೂದ್ ಈಗ ಮುರಬ್ಬಿಯಾಗಿದ್ದಾರೆ. ಅವರು ಹೇಳುತ್ತಾರೆ: ಮರ್ಝ್‌ಹರ್ ಅಹ್‌ಸನ್ ಬಹಳ ಉತ್ತಮ ವ್ಯಕ್ತಿತ್ವ ಹೊಂದಿದ್ದರು. ಅವರೊಂದಿಗೆ ಏಳು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಲು ಸಂದರ್ಭ ಲಭಿಸಿತು. ಅವರು ಅಸಂಖ್ಯಾತ ಸದ್ಗುಣಗಳನ್ನು ಹೊಂದಿದ್ದರು. ಅತಿಥಿ ಸತ್ಕಾರ, ವಿನಯಗಳಿಗೆ ಮಾದರಿಯಾಗಿದ್ದರು. ಯಾವಾಗಲೂ ಶುಭಪ್ರತೀಕ್ಷೆ ಹೊಂದಿದ್ದರು. ಒಮ್ಮೆ ನಾನು ಒಂದು ತಪ್ಪು ಮಾಡಿದಾಗ ಅವರು ನನ್ನನ್ನು ನಿಂದಿಸಿದರು. ಆದರೆ ಸ್ವಲ್ಪ ಸಮಯದ ನಂತರ ನನ್ನ ಬಳಿಗೆ ಬಂದು ಕ್ಷಮೆ ಯಾಚಿಸಿ ಅತ್ತುಬಿಟ್ಟರು. ಅವರು ಬಹಳ ಮೃದು ಹೃದಯಿಯಾಗಿದ್ದರು. ನಾನು ಯಾವಾಗಲಾದರೂ ಅಸೌಖ್ಯದಿಂದಿದ್ದಾಗ ನಾನು ಏಳುವ ಮೊದಲು ನನಗೆ ಉಪಹಾರ ಸಿದ್ಧಪಡಿಸಿ ತಂದು ಕೊಡುತ್ತಿದ್ದರು. ನನಗೆ ಶೀತವಾದರೆ ನನ್ನೊಂದಿಗೆ ಕೇಳದೆ ಬಿಸಿ ನೀರಿಗೆ ಜೇನು ಸೇರಿಸಿ ನನಗೆ ತರುತ್ತಿದ್ದರು. ಸಂಕ್ಷಿಪ್ತವಾಗಿ ಜೀವಂತ ಹೃದಯಿ, ನಿಷ್ಠಾವಂತ, ವಿನಯಶಾಲಿ, ಸಾತ್ವಿಕ, ಧರ್ಮದ ಸತ್ಯಸಂಧ ಯೋಧ, ತಖ್‌ವವಂತ, ಕಷ್ಟಪಡುವವ ಇವೆಲ್ಲಾ ಮರ್ಝ್‌ಹರ್ ಬಗ್ಗೆ ಬಳಸಬಹುದಾದ ಪದಗಳಾಗಿವೆ. ಅವರು ತನಗೆ ಇಷ್ಟಪಡುವುದನ್ನು ತನ್ನ ಸ್ನೇಹಿತರಿಗೂ ಇಷ್ಟಪಡುತ್ತಿದ್ದರು. ತಿನ್ನುವ ಯಾವುದಾದರೂ ಪದಾರ್ಥ ತರುವಾಗ ತನ್ನ ಸ್ನೇಹಿತರಿಗೂ ಕೊಡಲು ತರುತ್ತಿದ್ದರು. ಅವರು ಸರಳ ಜೀವಿತ ನಡೆಸುತ್ತಿದ್ದರು. ಅವರು ದುಂದುವೆಚ್ಚ ಮಾಡುವುದನ್ನು ಎಂದೂ ಕಾಣಲಿಲ್ಲ. ಸ್ವಚ್ಛತೆ ಬಗ್ಗೆ ಬಹಳ ಗಮನ ಹರಿಸುತ್ತಿದ್ದರು. ತಹಜ್ಜುದ್ ನಮಾಝ್ ತಪ್ಪದೆ ಅನುಷ್ಠಿಸುತ್ತಿದ್ದರು. ಪ್ರತಿ ವಾರ ಒಂದು ನಫ್ಲ್ ಉಪವಾಸ ಮಾಡುತ್ತಿದ್ದರು. ಚಂದ ಕೊಡುವ ಬಗ್ಗೆ ಬಹಳ ಆಸಕ್ತಿ ತೋರಿಸುತ್ತಿದ್ದರು. ಪ್ರತಿಯೊಂದು ಕೆಲಸ ಸುವ್ಯಸ್ಥಿತವಾಗಿ ಮಾಡುತ್ತಿದ್ದರು. ತನ್ನ ಸಮಯವನ್ನು ಬಹಳ ಬುದ್ಧಿಪೂರ್ವವಾಗಿ ವಿನಿಯೋಗಿಸುತ್ತಿದ್ದರು. ಜಾಮಿಅದ ಪಾಠವನ್ನು ಕಲಿಯುತ್ತಿದ್ದರಲ್ಲದೆ ಪ್ರತಿ ದಿನ ರೂಢಿಯಾಗಿ ಪವಿತ್ರ ಖುರ್‌ಆನ್ ಪಾರಾಯಣ ಮಾಡುತ್ತಿದ್ದರು. ಜಮಾಅತಿನ ಗ್ರಂಥಗಳನ್ನು ಓದುತ್ತಿದ್ದರು. ಹವಾಮಾನ ಹೇಗಿದ್ದರೂ ಪ್ರತಿದಿನ ವ್ಯಾಯಾಮ ಮಾಡುತ್ತಿದ್ದರು. ಪತ್ರಿಕೆಗಳನ್ನು ಓದುತ್ತಿದ್ದರು. ಮಧ್ಯಾಹ್ನ ಸ್ವಲ್ಪ ಹೊತ್ತು ವಿಶ್ರಾಂತಿಯನ್ನೂ ಪಡೆಯುತ್ತಿದ್ದರು. ಪ್ರತಿದಿನ ರಾತ್ರಿ ನಿದ್ರಿಸುವ ಮೊದಲು ತಪ್ಪದೆ ಡೈರಿ ಬರೆಯುತ್ತಿದ್ದರು. ಖುತ್‌ಬ ಜುಮುಅದ ಟಿಪ್ಪಣಿ ಬರೆಯುತ್ತಿದ್ದರು. ಖುತ್‌ಬದ ಅಂಶಗಳ ಬಗ್ಗೆ ಸ್ನೇಹಿತರೊಂದಿಗೆ ಚರ್ಚಿಸುತ್ತಿದ್ದರು. ಖಲೀಫರ ವಿರುದ್ಧ ಮತ್ತು ಜಮಾಅತಿನ ನಿಝಾಮ್ ವಿರುದ್ಧ ಯಾವುದೇ ಮಾತನ್ನು ಸಹಿಸುತ್ತಿರಲಿಲ್ಲ. ಜಮಾಅತಿನ ಆವಶ್ಯಕತೆ ಪ್ರಸ್ತಾಪಿಸಿದಾಗೆಲ್ಲಾ ಅದಕ್ಕೆ ಓಗೊಡುತ್ತಿದ್ದರು. ಅನ್ಯರಿಗೂ ಅದರ ಬಗ್ಗೆ ನೆನಪಿಸಿಕೊಡುತ್ತಿದ್ದರು. ಅವರು ತಮ್ಮನ್ನು ಖಲೀಫರ ಓರ್ವ ಸೈನಿಕನೆಂದು ಭಾವಿಸಿದ್ದರು ಹಾಗೂ ಅದೇ ರೀತಿ ವರ್ತಿಸುತ್ತಿದ್ದರು. ಅವರು ಯಾವಾಗಲೂ ಹೇಳುತ್ತಿದ್ದರು– ಖಿಲಾಫತ್‌ಗೋಸ್ಕರ ಜೀವಾರ್ಪಣೆ ಮಾಡಲು ನಾನು ಸಿದ್ಧನಾಗಿದ್ದೇನೆಂದು ಅವರದು ಕೇವಲ ಮಾತುಗಳಾಗಿರಲಿಲ್ಲ. ಅವರು ತಾನು ಆಡಿದ ಮಾತುಗಳನ್ನು ಭಾವನೆಗಳ ಪ್ರಕಟಣೆಗಳ ಮೂಲಕ ತಾನು ಹೇಳುವ ಹಾಗೆಯೇ ವಾಸ್ತವಿಕವಾಗಿಯೂ ಇದ್ದೇನೆಂದು ತೋರಿಸಿಕೊಡುತ್ತಿದ್ದರು.

ಅವರ ಸ್ನೇಹಿತ ಮುರಬ್ಬಿ ಶರ್‌ಜೀಲ್ ಬರೆಯುತ್ತಾರೆ: ಮರ್ಝ್‌ಹರ್ ಅತ್ಯಂತ ಶ್ರೇಷ್ಠ ಸ್ವಭಾವ ಗುಣಗಳನ್ನು ಹೊಂದಿದ ಪ್ರಿಯ ಸ್ನೇಹಿತರಾಗಿದ್ದರು. ಅವರು ಅನೇಕ ಸದ್ಗುಣಗಳನ್ನು ಹೊಂದಿದವರಾಗಿದ್ದರು. ಅವರಿಗೆ ಖಿಲಾಫತ್ ಸ್ಥಾನದ ಬಗ್ಗೆ ವಾಸ್ತವಿಕವಾದ ತಿಳುವಳಿಕೆ ಇತ್ತು. ಅಲ್ಲಾಹನ ಬಗ್ಗೆ ಅವರ ಭರವಸೆ ಬಹಳ ಬಲಿಷ್ಠವಾಗಿತ್ತು. ಜಮಾಅತ್‌ಗೋಸ್ಕರ ಎಲ್ಲವನ್ನೂ ಬಲಿದಾನ ಮಾಡುವವರಾಗಿದ್ದರು. ಅವರೊಬ್ಬ

ಧರ್ಮ ಪ್ರೇಮಿಯಾಗಿದ್ದರು. ಅವರು ಯಾರಿಗೂ ಕಷ್ಟ ಮತ್ತು ಹಾನಿ ಉಂಟು ಮಾಡುತ್ತಿರಲಿಲ್ಲ. ಅವರು ಯಾವಾಗಲೂ ಮುಗುಳು ನಗುತ್ತಿದ್ದರು. ಯಾರು ಎಷ್ಟು ತೊಂದರೆ ಕೊಟ್ಟರೂ ಅವರು ಸಿಟ್ಟಾಗುತ್ತಿರಲಿಲ್ಲ. ಅವರು ಎಂದೂ ಭಾವಾವೇಶಭರಿತರಾಗುತ್ತಿರಲಿಲ್ಲ. ಅವರು ಎಂದೂ ನಿರರ್ಥಕ ಮಾತುಗಳನ್ನಾಡುತ್ತಿರಲಿಲ್ಲ, ಹರಟೆ ಮಾತುಗಳಿಂದ ದೂರ ಸರಿಯುತ್ತಿದ್ದರು. ಅವರು ಕೆಟ್ಟ ಶಬ್ದ ಬಳಸಿದುದನ್ನು ಇಂದಿನ ತನಕ ಕಾಣಲಿಲ್ಲ. ಪ್ರತಿಯೊಂದು ಕೆಲಸ ಸಹನೆಯಿಂದ, ಧೈರ್ಯದಿಂದ, ಕಾಳಜಿಯಿಂದ, ಕಷ್ಟಪಟ್ಟು ಜವಾಬ್ದಾರಿಕೆಯೊಂದಿಗೆ ಮಾಡುತ್ತಿದ್ದರು. ಅವರು ಯಾವುದೇ ಕೆಲಸವನ್ನು ಚಿಕ್ಕದೆಂದು ಭಾವಿಸುತ್ತಿರಲಿಲ್ಲ. ಪ್ರತಿಯೊಬ್ಬನಿಗೆ ಸಹಾಯ ಮಾಡುತ್ತಿದ್ದರು. ಉದಾಸೀನತೆ ಅವರಲ್ಲಿ ಸ್ವಲ್ಪವೂ ಇರಲಿಲ್ಲ. ಅವರಿಗೆ ಜಾಮಿಅದ ಬಗ್ಗೆ ಬಹಳ ಪ್ರೀತಿ ಇತ್ತು. ಅವರ ನಿರ್ಧಾರಶಕ್ತಿ ಬಲಿಷ್ಠವಾಗಿತ್ತು. ಕಷ್ಟ ಅನುಭವಿಸುತ್ತಿದ್ದಾಗಲೂ ಧೈರ್ಯಗೆಡಲಿಲ್ಲ. ಕೊನೆಯ ತನಕ ತನ್ನ ರೋಗವನ್ನು ಸಹ ಬಹಳ ಧೈರ್ಯದಿಂದಲೇ ಸಹಿಸಿದರು. ಯಾರನ್ನೂ ಅವರು ಅಪಹಾಸ್ಯ ಮಾಡುತ್ತಿರಲಿಲ್ಲ. ಇತರರನ್ನೂ ಅದರಿಂದ ತಡೆಯುತ್ತಿದ್ದರು. ಒಬ್ಬ ಮುರಬ್ಬಿಯಲ್ಲಿ ಇರಬೇಕಾದ ಗುಣಗಳು ಅವರಲ್ಲಿದ್ದುವು. ಅವರ ಸ್ನೇಹಿತರು ಹೇಳುತ್ತಾರೆ: ಪ್ರಾರಂಭದಿಂದಲೇ ಅವರು ಪರಿಪೂರ್ಣ ಮುರಬ್ಬಿಯಾಗಿದ್ದರು. ಅವರು ತಖ್ವದ ಸೂಕ್ಷ್ಮ ಮಾರ್ಗದಲ್ಲಿ ಚಲಿಸುವವರಾಗಿದ್ದರು. ಯಾವುದೇ ರೀತಿಯ ತೋರಿಕೆ ಇರಲಿಲ್ಲ. ಅವರು ಒಳಗೆ ಹೇಗಿದ್ದರೋ ಹಾಗೆಯೇ ಹೊರಗೆ ಸಹ ಇದ್ದರು. ಅವರ ನಡೆನುಡಿಗಳಲ್ಲಿ ಸಮನ್ವಯತೆ ಇತ್ತು. ಅವರು ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಪಾಲಿಸುವವರಾಗಿದ್ದರು.

(ಹುಝೂರ್ ಕೊನೆಗೆ ಹೇಳಿದರು:) ಅತ್ಯಂತ ನಿಷ್ಠಾವಂತನೂ ತನ್ನ ಜೀವಿತದ ಉದ್ದೇಶ ಲಕ್ಷ್ಯಗಳನ್ನು ಅರಿತ ಅಹ್ಮದಿ ತರುಣ ಅವನಾಗಿದ್ದನು. ಅಲ್ಲಾಹನು ಅವನ ಮೇಲೆ ತನ್ನ ಕಾರುಣ್ಯವನ್ನು ಸುರಿಸುತ್ತಾ ಇರಲಿ. ಅವನ ಆಧ್ಯಾತ್ಮಿಕ ಪದವಿಗಳನ್ನು ಉನ್ನತಗೊಳಿಸುತ್ತಾ ಇರಲಿ. ನಾವು ಅವನನ್ನು ಯಾವಾಗಲೂ ಅಲ್ಲಾಹನ ಇಷ್ಟವನ್ನು ಇಷ್ಟಪಡುವವನ್ನಾಗಿ ಕಂಡೆವು. ಅಲ್ಲಾಹನು ಅವನಿಗೆ ತನ್ನ ಪ್ರಿಯರಾದವರ ಪಾದಗಳ ಬಳಿ ಸ್ಥಳ ನೀಡಲಿ. ಅವನ ಹಾಗಿರುವ ಸಾವಿರಾರು ವಾಕಿಫೀನ್‌ಗಳು ಹುಟ್ಟುವಂತಾಗಲಿ. ಅವರು ಅವನ ಹಾಗೆ ಸೂಕ್ಷ್ಮವಾಗಿ ತಮ್ಮ ಉದ್ದೇಶಲಕ್ಷ್ಯವನ್ನು ಮನವರಿಕೆ ಮಾಡುವವರಾಗಲಿ. ವಿಶಿಷ್ಟವಾಗಿ ಅವರ ತಂದೆ ತಾಯಂದಿರಿಗೋಸ್ಕರ ಮತ್ತು ಸಹೋದರಿಯರಿಗೋಸ್ಕರ ಪ್ರಾರ್ಥಿಸಿರಿ. ಅಲ್ಲಾಹನು ಅವರನ್ನು ಸಹನೆಯಲ್ಲೂ ಧೈರ್ಯದಲ್ಲೂ ವರ್ಧಿಸುವಂತೆ ಮಾಡಲಿ – ಆಮೀನ್.

ಜುಮುಅ ನಮಾಝ್ ನಂತರ ನಾನು ಕೆಳಗೆ ಹೋಗಿ ಮೃತನ ಜನಾಝು ಹಾಝಿರ್ ಅನುಷ್ಠಿಸುವೆನು. ನೀವು ಇಲ್ಲಿ ಸಾಲುಗಳನ್ನು ಸರಿಪಡಿಸಿ ಜನಾಝು ನಮಾಝ್‌ನಲ್ಲಿ ನನ್ನೊಂದಿಗೆ ಸೇರಿಕೊಳ್ಳಿರಿ.

*****


***Friday Sermon delivered by Hadrath Khaleefatul Masih Al Khamis(atba)***

*at Masjid Baithul Futhuh, London on 30-09-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon